# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 34/2018

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಪದ್ಮನಾಭ. ಬಿ. | | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ ಹೆಸರು | ಃ ಲೇಟ್. ಹೆಚ್.ಎಸ್. ಬಾಲಕೃಷ್ಣ ಮೂರ್ತಿ | | 07.02.2020 |
| ವಯಸ್ಸು | ಃ 34 ವರ್ಷ | | |
| ವೃತ್ತಿ | ಃ ಹಾರ್ಡವೇರ್ ಸಪ್ಲೆಯರ್ | ಪ್ರಾ.ಸಾ. ಃ | 10 |
| ವಾಸಸ್ಥಳ | ಃ ಕೆ.ಎನ್.ಪುರ ಬಡಾವಣೆ, ಮೈಸೂರು | ಚಾ.ಸಾ. ಃ | 02 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಸಾಕ್ಷಿಯು ಮಹಜರ್ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸ್ಥಳದ ಮಹಜರನ್ನು ನಿ.ಪಿ.2 ಎಂದು ಈಗಾಗಲೇ ಗುರುತಿಸಲಾಗಿದ್ದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.(ಸಿ) ಎಂದು ಗುರುತಿಸಲಾಯಿತು.

ಸುಮಾರು 4 ವರ್ಷಗಳ ಹಿಂದೆ ಉದಯಗಿರಿಯಲ್ಲಿರುವ ಎಂ.ಜಿ. ರಸ್ತೆಯಲ್ಲಿರುವ ಟೀ ಸ್ಟಾಲ್ ರಸ್ತೆಯ ಫುಟ್ ಪಾತ್ ಮೇಲೆ ಪೊಲೀಸರು ಪಂಚನಾಮೆ ಮಾಡಿ ನನ್ನ ಸಹಿಯನ್ನು ತೆಗೆದುಕೊಂಡಿರುತ್ತಾರೆ. ಸ್ಥಳದಲ್ಲಿ ಒಬ್ಬ ರಾಜು ಈತನನ್ನು ಕೊಲೆ ಮಾಡಿದ್ದರು. ಅಲ್ಲಿ ರಕ್ತ ಇತ್ತು. ಒಂದು ಲಗ್ನ ಪತ್ರಿಕೆ ಮತ್ತು ಮೈಸೂರು ಮಿತ್ರ ದಿನಪತ್ರಿಕೆ ಇತ್ತು ಅವುಗಳಿಗೆ ರಕ್ತ ಕಲೆಗಳಾಗಿದ್ದವು. ಪೊಲೀಸರು ಸ್ಥಳದಿಂದ ರಕ್ತದ ಕಲೆಯಾಗಿರುವ ಟಾರು ಮತ್ತು ಮಾದರಿ ಟಾರನ್ನು ಮಹಜರ ಮಾಡಿ ಅವುಗಳನ್ನು ಜಪ್ತಿ ಮಾಡಿರುತ್ತಾರೆ. ರಕ್ತದ ಕಲೆಯಾಗಿರುವ ಟಾರು ಮತ್ತು ಮಾದರಿ ಟಾರನ್ನು ಈಗಾಗಲೇ ಮು.ಮಾ.1 ಮತ್ತು 2 ಎಂದು ಈಗಾಗಲೇ ಗುರುತಿಸಲಾಗಿದೆ. ಲಗ್ನಪತ್ರಿಕೆ ಮತ್ತು ಮೈಸೂರು ದಿನಪತ್ರಿಕೆ ಈಗಾಗಲೇ ನಿ.ಪಿ.5 ಮತ್ತು 6 ಎಂದು ಗುರುತಿಸಲಾಗಿದೆ. ಮು.ಮಾ.1 ಮತ್ತು 2 ರ ಮೇಲೆ ತಾನು ಸಹಿ ಮಾಡಿದ ಚೀಟಿಯನ್ನು ಅಂಟಿಸಿದ್ದು ಇರುತ್ತದೆ ಎಂದು ಸಾಕ್ಷಿ ಹೇಳುತ್ತಾರೆ. ಪಂಚನಾಮೆಯ ಕಾಲಕ್ಕೆ ನನ್ನ ಜೊತೆ ರಾಜು ಎನ್ನುವವರು ಇದ್ದರು. ಸ್ಥಳದಲ್ಲಿ ಮೃತನಿಗೆ ಸಂಬಂಧಪಟ್ಟ ಒಂದು ಟಿ.ವಿ.ಎಸ್ ವಿಕ್ಟರ್ ದ್ವಿಚಕ್ರ ಇತ್ತು

<u>ಪಾಟೀ ಸವಾಲು ಃ ಆರೋಪಿತರ ಪರ ವಕೀಲರಿಂದಃ-</u>

. ಮೃತ ರಾಜು ನನಗೆ ಮೊದಲಿನಿಂದಲೂ ಪರಿಚಯ ಇರುತ್ತಾನೆ. ಪೊಲೀಸರು ನನಗೆ ಮಹಜರ್ ಸಮಯದಲ್ಲಿ ಲಿಖಿತ ನೋಟಿಸ್ಸನ್ನು ನೀಡಿ ಕರೆಸಿರುವುದಿಲ್ಲ. ನಾನು ಸ್ಥಳಕ್ಕೆ ಹೋದಾಗ ನನಗೆ ಪರಿಚಯ ಇರುವ ಇನ್ನೊಬ್ಬ ಪಂಚ ರಾಜು ಹಾಜರು ಇದ್ದರು. ಅಲ್ಲಿ ಬೇರೆ ಜನ ಸಾರ್ವಜನಿಕರು ಇದ್ದರು ಅವರ ಹೆಸರು ನನಗೆ ಗೊತ್ತಿಲ್ಲ. ಪಂಚನಾಮೆ ರಾತ್ರಿ ***9.00*** ರಿಂದ ***10.30*** ಗಂಟೆಯವರೆಗೆ ಮಾಡಿರುತ್ತಾರೆ. ಆ ಸಮಯಕ್ಕೆ ಪೊಲೀಸರು ಪೆಟ್ರೋ ಮ್ಯಾಕ್ಸ ಲೈಟ್ ನ ಬೆಳಕಿನಲ್ಲಿ ಪಂಚನಾಮೆ ಮಾಡಿರುತ್ತಾರೆ. ಪಂಚನಾಮೆಯನ್ನು ನಾನು ಓದಿ ಸಹಿ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಪಂಚನಾಮೆಯಲ್ಲಿ ಪೆಟ್ರೋ ಮ್ಯಾಕ್ಸ ಲೈಟ್ ನ ಉಲ್ಲೇಖ ಇರುತ್ತದೆ. ಕೃತ್ಯ ನಡೆದ ಸ್ಥಳದ ಚಕ್ಕುಬಂದಿ ಕೇಳಿದಾಗ ಸಾಕ್ಷಿ ಮೇನ್ ರೋಡ್ ಇರುತ್ತದೆ. ಫುಟ್ ಪಾತ ಮುಂದೆ ರಸ್ತೆ ಇರುತ್ತದೆ. ರಸ್ತೆಯ ಪಕ್ಕದಲ್ಲಿ ಮತ್ತೊಂದು ರಸ್ತೆ ಇರುತ್ತದೆ. ಫುಟ್ ಪಾತ ಪಕ್ಕದ ರಸ್ತೆಯಲ್ಲಿ ಮತ್ತೊಂದು ರಸ್ತೆ ಇರುತ್ತದೆ. ಪಂಚನಾಮೆ ಮಾಡಿದ ಸ್ಥಳ ಓಪನ್ ಜಾಗೆ ಇರುತ್ತದೆ ಎಂದು ಕೇಳಿದ್ದಕ್ಕೆ ಸಾಕ್ಷಿ ಫುಟ್ ಪಾತ್ ಇರುತ್ತದೆ ಎಂದು ಹೇಳುತ್ತಾರೆ. ಅದು ಖುಲ್ಲಾ ಜಾಗೆ ಇರುತ್ತದೆ ಎಂದು ಹೇಳುತ್ತಾರೆ. ಸ್ಯಾಂಪಲ್ ಗಳ ಮೇಲೆ ಮು.ಮಾ.***1*** ಮತ್ತು ***2*** ರ ಮೇಲೆ ಸಹಿ ಮಾಡಿರುತ್ತೇನೆ. ಮು.ಮಾ.***6*** ರನ್ನು ಸೀಲು ಮಾಡಿದ ಕಾಟನ ಬಟ್ಟೆಯ ಮೇಲೆ ಅಂಟಿಸಿದ ಚೀಟಿಯನ್ನು ತೋರಿಸಿ ಸದರಿ ಚೀಟಿಯ ಮೇಲೆ ಬರೆದ ಮೇಲೆ ಸಹಿ ಮಾಡಿದ್ದೀಯಾ ಅಥವಾ ಬರೆಯದೇ ಇದ್ದಾಗ ಸಹಿ ಮಾಡಿದ್ದೀಯಾ ಎಂದು ಕೇಳಿದ್ದಕ್ಕೆ ಸಾಕ್ಷಿ ಬರವಣಿಗೆ ಮಾಡಿದ ನಂತರ ಸಹಿ ಮಾಡಿರುತ್ತೇನೆ ಎಂದು ಹೇಳುತ್ತಾರೆ. ನಾನು ಕೇಸಿಗೆ ಸಂಬಂಧಪಟ್ಟಂತೆ ಉದಯಗಿರಿ ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ. ಮೃತ ರಾಜು ಈತನು ಪರಿಚಯ ಇದ್ದುದ್ದರಿಂದ ಪೊಲೀಸ್ ಠಾಣೆಗೆ ಬರೆದ ಮಹಜರಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪಂಚನಾಮೆಯ ಕಾಲಕ್ಕೆ ನನ್ನ ಜೊತೆ ಪಂಚನಾಮೆಯ ಮೇಲೆ ಇನ್ನೊಬ್ಬ ಸಹಿ ಮಾಡಿರುತ್ತಾನೆ.

***ಮರು ವಿಚಾರಣೆ:- ಇಲ್ಲ.***

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
***ಮೈಸೂರು***